# ಅಧ್ಯಯನ – 9 Study - IX

# ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ !

# Thy God Reigneth !

**ಇಮ್ಮಾನುವೇಲನ ಪ್ರತ್ಯಕ್ಷತೆಯನ್ನು ತೋರುವ ಪ್ರವಾದನೀಯ ನಿದರ್ಶನಗಳ ಪುನಃರಾರಂಭ, ಮತ್ತು ಆತನ ರಾಜ್ಯವು ಸ್ಥಾಪನೆಯ ಪ್ರಕ್ರಿಯೆಯಲ್ಲಿದೆ**

**"ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ – ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚಿಯೋನಿಗೆ ತಿಳಿಸುವವನಾಗಿದ್ದಾನೆ"** (ಯೆಶಾಯ 52:7)

**ಈ** ಕಾರ್ಯದ ಬಗ್ಗೆ ಇದರಲ್ಲಿ ಮತ್ತು ಹಿಂದಿನ ಸಂಪುಟಗಳಲ್ಲಿ ಪ್ರಸ್ತುತಿಪಡಿಸಿರುವ ಎಲ್ಲಾ ನಿದರ್ಶನಗಳ ದೃಷ್ಟಿಯಲ್ಲಿ, ಕರ್ತನ ಶ್ರದ್ಧಾವಂತ ಮತ್ತು ನಿಷ್ಠಾಪೂರ್ವಕ ಜನರಿಗೆ, ಆತನ ಪ್ರಿಯ ಚಿಯೋನಿಗೆ "ಕರ್ತನು ರಾಜ್ಯಭಾರ ವಹಿಸಿದ್ದಾನೆ" ಎಂಬ ಈ ವೈಭವಯುತ ಜ್ಞಾನವನ್ನು ಪ್ರಕಟಿಸಲು ನಮಗೆ ಯಾವುದೇ ಹಿಂಜರಿಯುವಿಕೆ ಇಲ್ಲ. ಸಭೆಯು ಹಲವು ಬಾರಿ ಪುನರುಚ್ಛರಿಸುವ ಪ್ರಾರ್ಥನೆಗೆ ಉತ್ತರ ಸಿಕ್ಕಿಯದೆ. ದೇವರ ರಾಜ್ಯವು ನಿಜವಾಗಿಯೂ ಬಂದಿದೆ. ಪ್ರಸ್ತುತ ಭೂಮಿಯ ಅರಸರುಗಳ ದಿನಗಳಲ್ಲಿ, ಅವರ ರಾಜ್ಯದ ಗೇಣಿಯು ಮುಗಿಯುವ ಮೊದಲು, ಅದು ಸಿದ್ಧಪಡುತ್ತಿದೆ. ಕ್ರಿಸ್ತನಲ್ಲಿ ಮರಣಹೊಂದಿದವರು ಈಗಲೂ ಸಹ ಎಬ್ಬಿಸಲ್ಪಟ್ಟು ತಮ್ಮ ಕರ್ತನೂ, ಶಿರಸ್ಸೂ ಆಗಿರುವಾತನೊಂದಿಗೆ ಘನತೆಗೇರಿಸಲ್ಪಡುತ್ತಿದ್ದಾರೆ ಮತ್ತು ಕ್ರಿಸ್ತನ ದೇಹದ 'ಪಾದಗಳ' ಸದಸ್ಯರಾದವರು, ಇನ್ನೂ ದೇಹಧಾರಿಗಳಾಗಿ ಕಾಯುತ್ತಿರುವವರು, ಈಗಾಗಲೇ ದೇವರ ಪರಿಶುದ್ಧ ಪರ್ವತ (ದೇವರ ರಾಜ್ಯ) ವನ್ನು ಹತ್ತಿರುವ ಮಹಿಮೆ ಹೊಂದಿದ ಗುಂಪಿನ ಸ್ಪೂರ್ತಿಪಡೆದವರಾಗಿ ಮೋಶೆಯು ಸಿನಾಯಿ ಪರ್ವತದಿಂದ ಕೆಳಗಿಳಿದು ಬಂದಾಗ ಪ್ರಜ್ವಲಿಸಿದಂತೆ ಆ ಉತ್ಕೃಷ್ಟವಾದ ಮಹಿಮೆಯ ಪ್ರಮಾಣವನ್ನು ಪ್ರತಿಫಲಿಸುತ್ತಿದ್ದಾರೆ. ಈ ಸಂದೇಶವಾಹಕರ ಮುಖಗಳು ಆ ಪರಲೋಕದ ಸಂತೋಷದೊಡನೆ ಹೊಳೆಯುತ್ತದೆ. ಅದು ಅವರ ಹೃದಯಗಳನ್ನು ತುಂಬಿಕೊಂಡು ಅವರು ಒಟ್ಟಾಗಿ ಮತ್ತು ದೇವರೊಡನೆ ಸಂಭಾಷಿಸುವಾಗ ಅವರ ತುಟಿಗಳ ಮೇಲೆ ತುಂಬಿ ಹರಿಯುತ್ತದೆ ಮತ್ತು ಪ್ರತಿಯೊಂದು ದೇಶಕ್ಕೂ (ಪರ್ವತಕ್ಕೂ) ಇಮ್ಮಾನುವೇಲನ ಆಳ್ವಿಕೆಯು ಪ್ರಾರಂಭವಾಗಿದೆ ಎಂಬ ಶುಭ ವರ್ತಮಾನವನ್ನು ಘೋಷಿಸುತ್ತದೆ. ಆತನ ಪಾದಗಳು (ಕ್ರಿಸ್ತನ ಪಾದಗಳು) ಪರ್ವತಗಳ ಮೇಲೆ ಎಷ್ಟೋ ಅಂದವಾಗಿವೆ. ಅದು ಸಹಸ್ರಮಾನದ ಸಂತೋಷ ಮತ್ತು ಸಮಾಧಾನಗಳ ಶುಭ ವರ್ತಮಾನವನ್ನು ತರುವುದಾಗಿದ್ದು ಕರ್ತನ ಆಳ್ವಿಕೆಯು ಪ್ರಾರಂಭವಾಗಿದೆ! ಎಂಬುದನ್ನು ದೃಢಪಡಿಸುತ್ತದೆ.

ಇವುಗಳು ಅದ್ಭುತವಾದ ಸತ್ಯಗಳಾಗಿವೆ: ದೇವರ ರಾಜ್ಯವು ಸಿದ್ಧವಾಗುವ ಪ್ರಕ್ರಿಯೆಯಲ್ಲಿದೆ. ಕರ್ತನಾದ ಯೇಸು ಮತ್ತು ಜೀವಂತವಾಗಿ ಎಬ್ಬಿಸಲ್ಪಟ್ಟ ಭಕ್ತರುಗಳು ಈಗಾಗಲೇ ಇಲ್ಲಿದ್ದಾರೆ ಮತ್ತು ಮಹಾ ಸುಗ್ಗಿಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರೊಡನೆ, ನಾವು ಸಹಾ ಗೌರವ ಹೊಂದಿದ ದೇಹದ ಸದಸ್ಯರಾಗಿ, ಆತನ ಪಾದಗಳಾಗಿ, ಇನ್ನೂ ಮಾಂಸದೇಹಧಾರಿಗಳಾಗಿದ್ದಾಗ್ಯೂ, ಆತನ ಜೊತೆ ಸೇವಕರಾಗಿ ಜನರಿಗೆ ಸುವಾರ್ತೆಯನ್ನು ಮುಂದಾಗಿ ಸೂಚಿಸುತ್ತಾ ಮತ್ತು ಅದ್ಭುತವಾದ ಮತ್ತು ಸಂಕಟಮಯವಾದ ಘಟನೆಗಳು ವೈಭವಯುತವಾದ ನೀತಿಯುತ ಆಳ್ವಿಕೆಯನ್ನು ಪರಿಚಯಿಸುವ ದಾರಿ ಯಾಗಿದೆ ಎಂಬ ಮಹತ್ವದ ಸುವರ್ತಮಾನವನ್ನು ಘೋಷಿಸುವಂತೆ ಅನುಮತಿಸಲ್ಪಟ್ಟಿದ್ದೇವೆ.

"ಕರ್ತನು ಆತನ ಹತ್ತು ಸಾವಿರ ಭಕ್ತರೊಡನೆ ಬರುವನು" ಎಂದು ಪ್ರವಾದಿಗಳು ಹೇಳಿದವರು ಇವರೇ; "ಕರ್ತನು ನನ್ನ ದೇವರೂ ತನ್ನೆಲ್ಲ ಭಕ್ತಜನರೊಂದಿಗೆ ಬರುತ್ತಾನೆ, ಮನುಷ್ಯಕುಮಾರನು ಮಹಿಮೆಯೊಡನೆ ಬರುತ್ತಾನೆ ಮತ್ತು ಎಲ್ಲಾ ಪವಿತ್ರ ದೂತರುಗಳು (ಭಕ್ತರುಗಳು, ಆತನ ಪವಿತ್ರ ಸಂದೇಶವಾಹಕರುಗಳು) ಆತನೊಡನಿರುತ್ತಾರೆ. ಅಗ್ನಿಮಯವಾದ ಪ್ರವಾಹ (ಕಠಿಣ ತೀರ್ಪುಗಳ ಸಂಕೇತ, ಸಂಕಟದ ಸಮಯ) ಹೊರಟು ಆತನ ಮುಂದೆ ಹರಿದು ಬರುತ್ತದೆ; ಸಹಸ್ರ ಸಹಸ್ರ ಜನರು ಆತನಿಗೆ ಸೇವೆ ಸಲ್ಲಿಸುತ್ತಾರೆ (ಆತನ ಭಕ್ತ ಜನರು ಮಾತ್ರವಲ್ಲ, ಬಹಳಷ್ಟು ಇತರೆ ಪಾರುಪತ್ಯದಾರರು ಮತ್ತು ಪಾರುಪತ್ಯಕ್ಕೆ ಸೇರಿದವರು ಸಹಾ) ಹತ್ತು ಸಾವಿರದ ಹತ್ತು ಸಾವಿರದಷ್ಟು (ಎಲ್ಲಾ ಮಾನವ ಜಾತಿಯವರು) ಆತನ ಮುಂದೆ ನಿಂತುಕೊಂಡಿದ್ದಾರೆ; ತೀರ್ಪು ಸಿದ್ಧವಾಗಿದೆ,

ಪುಸ್ತಕಗಳು ತೆರೆಯಲ್ಪಡುತ್ತವೆ – (ಯೂದ: 14: ಜೆಕರ್ಯ 14:5; ಮತ್ತಾಯ 25:31; ದಾನಿಯೇಲ 7:10).

ಪ್ರಸ್ತುತ ಪರಿಸ್ಥಿತಿಯು ಇಂತಿದೆ. ಮಹಾ ನ್ಯಾಯಾಧಿಪತಿಯು ಬಂದಿದ್ದಾನೆ. ಪ್ರಥಮ ಆಗಮನದಲ್ಲಿ ಬಂದಂತೆ ತೇಜೋವಧೆ ಹೊಂದುವ, ದೇಹದಲ್ಲಿ ತ್ಯಾಗವನ್ನು ಮಾಡುವುದಕ್ಕೆ ಅಲ್ಲ. ಆದರೆ ಆತನ ಅಧಿಕಾರದ ಸಮೃದ್ಧಿಯಲ್ಲಿ, ಆತ್ಮಸ್ವರೂಪಿಯಾಗಿ, ದೇವರ ಅಧಿಕಾರದ ಮಹಿಮಾವಸ್ತ್ರವನ್ನು ಧರಿಸಿದವನಾಗಿ, ಯೆಹೋವನ ಪ್ರತಿನಿಧಿಯಾಗಿ, ಸಂಪೂರ್ಣವಾಗಿ ಎಂದೆಂದಿಗೂ ಕೇಡು ಮತ್ತು ಅನೀತಿಯನ್ನು ಕೆಳಹಾಕಲು ಮತ್ತು ವಿಮೋಚನೆಗೊಂಡ ಕುಲಕ್ಕೆ ಸೇರಿದವರೆಲ್ಲರನ್ನೂ ದೇವರೊಂದಿಗೆ ಸಾಮರಸ್ಯಗೊಳ್ಳುವಂತೆ ಪುನಃಸ್ಥಾಪಿಸಿ, ಅವರು ಸರ್ವಸಂಪೂರ್ಣತೆಯನ್ನು, ಶಾಶ್ವತ ಜೀವವನ್ನು ಪಡಕೊಳ್ಳುವಂತೆ ಮಾಡಲು ಬಂದಿದ್ದಾನೆ. ದೇವರ ಯೋಜನೆಯು ಈಗ ಪ್ರಕಟಗೊಂಡಿದೆ. ನಾವು ಹಿಂದೆಂದೂ ಇಲ್ಲದಂತೆ ಅದನ್ನು ಅರ್ಥ ಮಾಡಿಕೊಳ್ಳುವಂತೆ ಮಾಡಲಾಗಿದೆ. ದೇವರ ಪ್ರಕಟನೆಗಳ ಪುಸ್ತಕಗಳ ತೆರೆಯೋಣವು ಸಧ್ಯದಲ್ಲಿಯೇ ಮುಕ್ತಾಯ ಗೊಳ್ಳುವುದು. ಪ್ರಪಂಚದ ನ್ಯಾಯತೀರ್ವಿಕೆಯು ಹೆಸರು ಮಾತ್ರ ಕ್ರೈಸ್ತ ಪ್ರಪಂಚದವರ ಸಂಸ್ಥೆಗಳ ಮೇಲೆ ಈಗಾಗಲೇ ಪ್ರಾರಂಭಗೊಳ್ಳುತ್ತಿದೆ. ಲೋಕದವರ ಅನುಮಾನಕ್ಕೆ ತುತ್ತಾಗದಂತೆ ಈ ರೀತಿ ಪ್ರಾರಂಭವಾದ ಮಹಾ ಕಾರ್ಯವು, ಕರ್ತನು ಅಪೋಸ್ತಲರುಗಳು ಮತ್ತು ಪ್ರವಾದಿಗಳು ಮುಂತಿಳಿಸಿದ ಭವ್ಯ ನೆರವೇರಿಕೆಯಲ್ಲಿ ಮುಂದುವರೆದು ಸಮಸ್ತ ಲೋಕವು ಇರಿಯಲ್ಪಟ್ಟವನು, ದೇವರಿಂದ ಕಳುಹಿಸಲ್ಪಟ್ಟ ಈ ಲೋಕದ ವಿಮೋಚಕನು, ಬಿಡುಗಡೆಗೊಳಿಸುವವನು ಎಂದು ನೋಡುವಂತೆ ನಡೆಸಲ್ಪಡುವವರೆಗೂ ಪ್ರಗತಿಗೊಳ್ಳುತ್ತದೆ. ಭಕ್ತರುಗಳು ಸಹಾ ಬಹುಕಾಲದಿಂದ “ಯೇಸುವಿನ ಕಡೆಗೆ ತಮ್ಮ ನಂಬಿಕೆಯ ಜನಕ ಮತ್ತು ಅದನ್ನು ಪೂರೈಸುವಾತನು ಎಂದು ನೋಡುತ್ತಿದ್ದರು” (Vol. II., Chapter V ನೋಡಿರಿ). ಸಭೆಯೊಂದಿಗೆ ಪ್ರಾರಂಭವಾಗುವ ಎಣಿಕೆ ಅಥವಾ ತೀರ್ಪು ಶೀಘ್ರದಲ್ಲಿಯೇ ವ್ಯಾಪಿಸುವುದು ಮತ್ತು ಎಲ್ಲಾ ಜೀವಂತ ದೇಶಗಳನ್ನು ಒಳಗೊಂಡಿರುವುದು; ಮತ್ತು ತಕ್ಕ ಸಮಯದಲ್ಲಿ ಮತ್ತು ಕ್ರಮಗತಿಯಲ್ಲಿ ಮರಣಕ್ಕೊಳಗಾದ ಪ್ರಬಲ ಸಮೂಹದವರನ್ನು ಪುನರುತ್ಥಾನಕ್ಕಾಗಿ ವೇದಿಕೆಗೆ ಕರೆತರಲಾಗುವುದು.

ಪರದೆಯಿಂದಾಚೆಗೆ ರಾಜ್ಯದ ಮಹಿಮೆಯುಳ್ಳ ಸದಸ್ಯರು ಪ್ರಸ್ತುತ ಘಟನೆಗಳ ಕಾರ್ಯಗಳನ್ನು ಒಂದು ರೂಪಕ್ಕೆ ತರುವ ಕಾರ್ಯವನ್ನು ಮಾಡುತ್ತಾ ಭವ್ಯವಾದ ಆಡಳಿತಕ್ಕೆ ಸಿದ್ಧತೆ ಮಾಡುತ್ತಿರುವಾಗ ಪರದೆಯಿಂದೀಚೆಗೆ ಇರುವವರಿಗೂ ಒಂದು ಮುಖ್ಯವಾದ ಕೆಲಸವಿದೆ. ಅವರ ನಿಯೋಗವೆಂದರೆ ಆಯ್ಕೆಗೊಂಡವರನ್ನು ಒಟ್ಟುಗೂಡಿಸುವುದು ಮತ್ತು ಅವರ ಹಣೆಯ ಮೇಲೆ ಸತ್ಯದ ಜ್ಞಾನದೊಂದಿಗೆ ಬೌದ್ಧಿಕವಾಗಿ ಮುದ್ರೆ ಒತ್ತುವುದು (ಪ್ರಕಟನೆ 7: 3); ಪ್ರಸ್ತುತ ಸತ್ಯವೆಂಬ ಕುಡುಗೋಲಿನಿಂದ ಗೋಧಿಯನ್ನು ಹಣಜಿಯಿಂದ ಪ್ರತ್ಯೇಕಿಸುವುದು ಮತ್ತು ಚಿಯೋನಿಗೆ “ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ!” ಎಂಬ ಮುಖ್ಯ ವಿಷಯವನ್ನು ಸಾರುವುದು. ಈ ಕಾರ್ಯವೂ ಸಹಾ ತ್ವರಿತವಾಗಿ ಮುಂದುವರೆಯುತ್ತಿದೆ ಮತ್ತು ಒಮ್ಮೆ ಮುದ್ರಿತರಾದ ಎಲ್ಲಾ ನಂಬಿಗಸ್ತರೂ ಇತರರನ್ನು ಮುದ್ರಿಸುವಂತೆ ಅವಿಶ್ರಾಂತವಾಗಿ ನಿರತರಾಗಿರುವರು. ಕೂಡಲೇ ಈ ಮಹಾ ಕಾರ್ಯವು ನೆರವೇರುವುದು – ಆಯ್ಕೆಗೊಂಡವರು ಕೂಡಿಕೊಳ್ಳುವರು ಮತ್ತು ಮಹಿಮೆ ಹೊಂದಿಕೊಳ್ಳುವರು.

ಸಭೆಯ ಆರಂಭದ ಸದಸ್ಯರು ಹೊಂದಿದ ವಾಗ್ದಾನವು ಆಶೀರ್ವಾದಕರವಾದದ್ದು, ಆತನು ಹೋದದನ್ನು ನೋಡಿದವರು ಆತನು ಬರುವದನ್ನು ಸಹ ಖಂಡಿತವಾಗಿ ನೋಡಬೇಕು, ಹಾಗೂ ಯುಗ ದಾದ್ಯಂತ ಪರೀಕ್ಷಿಸಲ್ಪಟ್ಟವರು, ಹಿಂಸೆಗೊಳಗಾದವರು, ನಂಬಿಗಸ್ತರು, ಆತನ ಪ್ರತ್ಯಕ್ಷತೆಯ ನಿರೀಕ್ಷೆ ಇಟ್ಟು ಕೊಂಡಿದ್ದರೂ ಧನ್ಯರು. ಅವರು ಆತನಂತೆ ಎದ್ದು ಬರುವ ಭರವಸೆಯೊಂದಿಗೆ ನಿದ್ರೆಗೆ ಜಾರುವವರೆಗೂ ಆತನ ಬರುವಿಕೆಗಾಗಿ ಕುತೂಹಲದಿಂದ ಕಾಯುತ್ತಿದ್ದರು. ಆದರೆ ನಿನ್ನ ಕಣ್ಣುಗಳ ಇನ್ನೂ ಹೆಚ್ಚು ಆಶೀರ್ವಾದ ಹೊಂದಿರುವುದು. “ಓ ಇಂದಿನ ಭಕ್ತರುಗಳೇ, ದೀರ್ಘಕಾಲದಿಂದ ನೋಡಲು ಬಯಸಿದವನನ್ನು; ಇಸ್ರಾಯೇಲ್ಯರು ನಿರೀಕ್ಷಿಸಿದಾತನನ್ನು ನಿಮ್ಮ ಕಣ್ಣುಗಳು ನೋಡುತ್ತವೆ, ನಿಮ್ಮ ಕಿವಿಯು ಕೇಳಿಸಿಕೊಳ್ಳುತ್ತವೆ".

ಪ್ರವಾದಿಯಾದ ಯೆಶಾಯನು ಮುಂತಿಳಿಸಿದಂತೆ, ಹೆಸರು ಮಾತ್ರದ ಚಿಯೋನಿನಲ್ಲಿ, ಕರ್ತನೊಡನೆ ತಮ್ಮ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲು ವಿಫಲರಾದವರು ಅಂಧಕಾರದ ಮೋಡಗಳಿಗೆ ಹೆದರುವರು. ಅದು ಆತನ ಮುಖ ಪ್ರಕಾಶತೆಯನ್ನು ಮಂಕಾಗಿಸುತ್ತದೆ ಮತ್ತು ಹೆದರಿಕೆಯುಳ್ಳ ಕಪಟಿಗಳನ್ನು ಆಶ್ಚರ್ಯಪಡಿಸುತ್ತದೆ, ನಿಜವಾದ ಚಿಯೋನ್ ನಂಬಿಕೆಯ ಕಣ್ಣುಗಳಿಂದ ಅರಸನನ್ನು ಆತನ ಸೌಂದರ್ಯದೊಡನೆ ನೋಡುವರು ಮತ್ತು ಇನ್ನೂ ದೂರದಲ್ಲಿರುವ ಭೂಮಿಯನ್ನು ನಿರೀಕ್ಷಿಸುವರು, ಇದು ದ್ರಾಕ್ಷೆ ಮತ್ತು ಧವಸ ಧಾನ್ಯದ ಭೂಮಿಯಾಗಿದೆ, ಈ ಮಹಾ ಬಲಶಾಲಿ ಅರಸನು ಮತ್ತು ಮಹಾವಿಮೋಚಕನು ಬಿದ್ದುಹೋದ ಜನಾಂಗವನ್ನು ಎತ್ತಿ

ನಡಿಸಲು ಬಂದಿದ್ದಾನೆ. "ಚಿಯೋನಿನ ಯಾವ ನಿವಾಸಿಯೂ ತಾನು ಅಸ್ವಸ್ಥನು ಎಂದು ಹೇಳನು; ಅಲ್ಲಿನ ಜನರ ಪಾಪವು ಪರಿಹಾರವಾಗುವುದು" – ಯೆಶಾಯ 33:14, 17, 24.

ಆ ಮಹಿಮೆಯುಳ್ಳ ಭೂಮಿ, ಪುನರ್ ಸ್ಥಾಪನೆಯಾದ ಪರದೈಸನ್ನು ನಾವು ಈಗ ಸ್ಪಷ್ಟವಾಗಿ ಸಾವಿರ ವರ್ಷಗಳ ದೀರ್ಘ ದರ್ಶನವನ್ನು ಗ್ರಹಿಸುತ್ತೇವೆ ಹಾಗೂ ಆನಂದದಿಂದಲೂ, ಹಾಡುತ್ತಲೂ, ಮೋಶೆಗಿಂತಲೂ ಮಿಗಿಲಾದ ಮಹಾಪ್ರವಾದಿಯ ನಾಯಕತ್ವದಲ್ಲಿರುತ್ತೇವೆ. ಆತನು ಈಗಲೂ ನಮ್ಮ ಮಧ್ಯದಲ್ಲಿದ್ದಾನೆ, ವಿಜಯ ಹೊಂದಿದ ಸೇನೆಯನ್ನು ವಿಮೋಚಿಸಿ ಮಹಾಪರಿಶುದ್ಧ ಮಾರ್ಗಕ್ಕೆ ನಡೆಸುವನು. ಆ ಸುಂದರ ಭೂಮಿಯು ಪಾಪ, ಮರಣ ಮತ್ತು ಎಲ್ಲಾ ಕೇಡುಗಳಿಂದ ವಿಶ್ರಾಂತಿ ಹೊಂದಿರುವುದಾಗಿದೆ.

ಕರ್ತನಿಗೆ ಹರ್ಷಧ್ವನಿಗೈಯಿರಿ. ಆತನ ಭಕ್ತರೇ, ಆತನ ಪವಿತ್ರನಾಮದ ಸ್ಮರಣೆಗೆ ಕೃತಜ್ಞತಾ ಸ್ತುತಿ ಮಾಡಿರಿ. ಆತನ ಕೋಪವು (ಅದು ಅವಶ್ಯವಾಗಿ ಮಹಾಸಂಕಟದ ಸಮಯದಲ್ಲಿ ಲೋಕವನ್ನು ಮುಳುಗಿಸಲು ಪ್ರಕಟಣೆಗೊಳ್ಳಲೇಬೇಕು) ಕ್ಷಣ ಮಾತ್ರವೇ. ಆತನ ಅನುಗ್ರಹವೋ ಜೀವಮಾನದಲ್ಲೆಲ್ಲಾ ಇರುವುದು. ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವುದು. "ಶೀಘ್ರದಲ್ಲಿಯೇ ದಂಡನೆಗೆ ಒಳಗಾಗಿ ಮತ್ತು ಪರಿವರ್ತನೆಗೊಂಡ ಲೋಕವು ಕೊಂಡಾಟದ ಧಾಟಿಯನ್ನು ಗ್ರಹಿಸಿ ಹೀಗೆ ಹಾಡುವರು. ಆಗ – ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ. ನಾನು ಕಟ್ಟಿಕೊಂಡ ಗೋಣಿತಟ್ಟನ್ನು ತೆಗೆದು ಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ. ಇದರಿಂದ ಯೆಹೋವನೇ ನನ್ನ ಮನಸ್ಸು ಎಡಬಿಡದೆ ನಿನ್ನನ್ನು ಕೀರ್ತಿಸುತ್ತಿರುವುದು; ನನ್ನ ದೇವರೇ, ನಿನ್ನನ್ನು ಸದಾಕಾಲ ಸ್ತುತಿಸುವೆನು" (ಕೀರ್ತನೆ 30:4,5,11,12).

ಈಗ "ಪ್ರವಾದನಾ ವಾಕ್ಯಗಳು ನಮಗೆ ಮತ್ತೂ ದೃಢವಾಗಿದೆ" ಎಂಬ ಖಚಿತ ಮಾತುಗಳಲ್ಲಿನ ಹೆಜ್ಜೆಗಳನ್ನು ನಿಮ್ಮ ಮನದಲ್ಲಿ ತಂದುಕೊಳ್ಳಿರಿ. ಇದರಿಂದ ನಾವು ನಮ್ಮ ಹೃದಯ ಹರ್ಷಿಸುವ ಮತ್ತು ಆತ್ಮ ಪ್ರೇರಿಸುವ ಜ್ಞಾನಕ್ಕೆ ಬಂದಿದ್ದೇವೆ. ನಮ್ಮ ಹಿಂದೆ ಎಲ್ಲಾ ಪ್ರವಾದನೀಯ ಮಹತ್ವದ ಚಾರಿತ್ರಿಕ ಘಟನೆಗಳು ಅವೆ. ಇದು ಪ್ರಪಂಚದ ಇತಿಹಾಸದಲ್ಲಿ ಬಹು ಅದ್ಭುತವಾದ ಕಾಲವೆಂದು ಈ ಸಮಯವನ್ನು ಸೂಚಿಸುತ್ತದೆ. ಅಕ್ಟೋಬರ್ 1873ರಿಂದ ನಾವು ಏಳನೆಯ ಸಹಸ್ರಮಾನದಲ್ಲಿ ಜೀವಿಸುತ್ತಿದ್ದೇವೆಂದು ತಿಳಿಸುತ್ತದೆ. ಅದು ಅನ್ಯಜನರ ರಾಜ್ಯದ ಗೇಣಿಯಾಗಿದೆ. "ಅನ್ಯಜನಗಳ ಕಾಲವು" 1914ನೇ ಇಸವಿಯೊಂದಿಗೆ ಮುಕ್ತಾಯಗೊಳ್ಳುತ್ತದೆ ಮತ್ತು ರಾಜ್ಯವನ್ನು ಪಡಕೊಳ್ಳುವವನ ಆಗಮನದ ಯುಕ್ತ ಕಾಲವು 1874 ಆಗಿದೆ. ಈ ಅನ್ಯಜನರ ರಾಜರುಗಳ ಕಾಲದಲ್ಲಿ, ಅವರ ಅಧಿಕಾರದ ಗೇಣಿಯು ಮುಗಿಯುವ ಮೊದಲು, ಪರಲೋಕದ ದೇವರು ಒಂದು ರಾಜ್ಯವನ್ನು ಸಿದ್ಧಪಡಿಸುವನು ಮತ್ತು ಆ ರಾಜ್ಯದ ಸಿದ್ಧಪಡಿಸುವಿಕೆಯು ವಾಸ್ತವಾಗಿ 1878ರಿಂದ ಪ್ರಗತಿಯಲ್ಲಿರುವುದು; ಅಲ್ಲಿ ಕ್ರಿಸ್ತನಲ್ಲಿ ಸತ್ತವರೆಲ್ಲರ ಪುನರುತ್ಥಾನವು ಯುಕ್ತ ಸಮಯ. ಆದುದರಿಂದ ಆ ದಿನದಿಂದ, ನಮ್ಮ ಕರ್ತನು ಮತ್ತು ಶಿರಸ್ಸು ಈ ಲೋಕದಲ್ಲಿ ಅದೃಶ್ಯನಾಗಿ ಉಪಸ್ಥಿತನಿರುವನು, ಅಲ್ಲದೇ, ಈ ಎಲ್ಲಾ ಪವಿತ್ರ ಸಂದೇಶವಾಹಕರು ಸಹಾ ಆತನೊಡನಿರುವರು. ಮತ್ತು ಮುಂದೆ ಗಮನಿಸ ಬೇಕಾದುದೆಂದರೆ, ಕ್ರಿಸ್ತನಲ್ಲಿ ಸತ್ತವರ ಪುನರುತ್ಥಾನದ ಈ ದಿನಾಂಕವು ದೇಹ ಮತ್ತು ಶಿರಸ್ಸಾದಾತನ ಪುನರುತ್ಥಾನದ ದಿನಾಂಕದೊಂದಿಗೆ ಸಮಾನಾಂತರವಾಗಿರುವುದು. ನಮ್ಮ ಕರ್ತನ ಪುನರುತ್ಥಾನವು ಆತನ ಆಗಮನದ ಮೂವತ್ತು ಮೂರುವರೆ ವರ್ಷಗಳ ನಂತರ ಸಂಭವಿಸಿತು. ಆತನು ಕ್ರಿ.ಶ. 29ರಲ್ಲಿ ಮೆಸ್ಸೀಯನಾದನು. ಆತನ ದೇಹವಾದ ಸಭೆಯ ಪುನರುತ್ಥಾನವು ನಾವು ಕಂಡುಕೊಂಡಂತೆ 1878ರಲ್ಲಿ, ಆತನ ಎರಡನೆಯ ಬರೋಣದ ಅಕ್ಟೋಬರ್ 1874ರಿಂದ ಮೂರೂವರೆ ವರ್ಷಗಳ ನಂತರದಲ್ಲಿ ಕಾಲವಾಗಿದೆ.

ನಮ್ಮ ಕರ್ತನ ಹಿಂದಿರುಗುವಿಕೆಯ ವಿಧಾನದ ಬಗ್ಗೆಯೂ ಸಹ ಪ್ರವಾದನೆಯಲ್ಲಿ ಸೂಚಿತವಾಗಿದೆ. ಆದುದರಿಂದ ಆತನು ಪ್ರತ್ಯಕ್ಷನಾಗಿದ್ದರೂ, ನಂಬಿಕೆಯ ಕಣ್ಣುಗಳಿಂದ ಹೊರತಾಗಿ ಈಗ ಆತನನ್ನಾಗಲೀ ಆತನ ಹೋಲಿಕೆಯಲ್ಲಿರುವ ಎದ್ದು ಬಂದಿರುವ ಭಕ್ತರನ್ನಾಗಲೀ (Saints) ನೋಡಬೇಕೆಂದು ನಿರೀಕ್ಷಿಸಬಾರದು. ನಂಬಿಕೆಯು "ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ" ಎಂಬುದೇ. ನಾವು ಕ್ರಿಸ್ತನ ಪಾದಗಳು "ಆಗಿರುವವರನ್ನು ಶೀಘ್ರದಲ್ಲೇ ಅದೇ ಅದ್ಭುತ ಹೋಲಿಕೆಗೆ ಬದಲಾಗುವರು'' ಎಂಬುದನ್ನು ಅರಿತುಕೊಂಡಿದ್ದೇವೆ. ಆಗ ಅವರು ಆತನಂತೆ ಕ್ರಿಸ್ತನಂತೆ, ಈಗ ಆತನೊಡನಿರುವ ಎದ್ದು ಬಂದ ಎಲ್ಲಾ ಭಕ್ತರುಗಳಂತೆ ಆತ್ಮ ಸ್ವರೂಪಿಗಳಾಗಿರುವರು. ಅವರು ಸೂಕ್ತ ಸಮಯದಲ್ಲಿ ಆತನಿರುವ ಪ್ರಕಾರವೇ ಆತನನ್ನು

ಕಾಣುವರು (1 ಯೋಹಾನ 3:2). ಮುಂತಿಳಿಸಲ್ಪಟ್ಟಂತೆ ಎಲೀಯನ ಬರೋಣವು ಮತ್ತು ಅಧರ್ಮಸ್ವರೂಪಿಯ ಭವಿಷ್ಯವಾಣಿಯು ಆತನ ಬರೋಣದ ಮುಂಚಿತವಾಗಿ ಸಂಭವಿಸಬೇಕಾಗಿದೆ ಎಂಬುದು ನೆರವೇರಿದ ಸತ್ಯಗಳಾಗಿವೆ ಎಂಬುದನ್ನು ನಾವು ನೋಡಿದ್ದೇವೆ.

ಪ್ರವಾದಿಯಾದ ದಾನಿಯೇಲನು ಗಮನ ಸೆಳೆಯುವ ನಿಗದಿತ ದಿನಾಂಕಗಳ ಬಗ್ಗೆ ನಾವು ಗುರುತಿಸಿದ್ದೇವೆ. 2300 ದಿನಗಳು 1846ನ್ನು ಸೂಚಿಸುತ್ತದೆ. ಆ ಸಮಯದಲ್ಲಿ ಕರ್ತನ ಪವಿತ್ರಾಲಯವು ಪೋಪನ ಅಧಿಕಾರದ ಕಲುಷಿತವಾದ ತಪ್ಪುಗಳು ಮತ್ತು ವಿಚಾರಸರಣಿಗಳು ತುಂಬಿರುವದನ್ನು ಶುದ್ಧೀಕರಿಸಲಾಗುವುದು; ಅಲ್ಲಿನ ಶುದ್ಧೀಕರಣ ಕಾರ್ಯವು ನೆರವೇರಿದೆ ಎಂಬುದನ್ನು ನಾವು ನೋಡಿದ್ದೇವೆ. ನಾವು ಪೋಪನ ಹಿಂಸೆಯ ಅಧಿಕಾರವನ್ನು ಮತ್ತು ಅಂತ್ಯಕಾಲ ಅದು ಅಲ್ಲಿ 1799ರಲ್ಲಿ ಪ್ರಾರಂಭಗೊಂಡು ಮುಗಿದ 1260 ದಿನಗಳ ಅಥವಾ ಒಂದು ಕಾಲ ಮತ್ತು ಅರ್ಧ ಕಾಲಗಳ ಈಡೇರುವಿಕೆಗಳನ್ನು ಗಮನಿಸಿದ್ದೇವೆ. ಈ 1290 ದಿನಗಳು ಯಾವ ರೀತಿಯಲ್ಲಿ ಧಾರ್ಮಿಕ ಸತ್ಯಗಳ ರಹಸ್ಯ ಅರ್ಥವಾಗುವದಕ್ಕೆ ಪ್ರಾರಂಭಗೊಂಡವು ಅದು 1829ನೇ ವರ್ಷದಲ್ಲಿ ಮತ್ತು 1844ರ ಎರಡನೇ ಆಗಮನದ ಚಳುವಳಿ ಎಂದು ಕರೆಯಲ್ಪಡುವ ಮಹಾ ಚಳುವಳಿಯಲ್ಲಿ ಪರಾಕಾಷ್ಠೆಯನ್ನು ಕಂಡಿತೆಂಬುದನ್ನು ಗುರುತಿಸುತ್ತದೆ. ಕರ್ತನ ಭವಿಷ್ಯವಾಣಿಯ ಪ್ರಕಾರ ಆಗ, ಆತನ ನಿಜವಾದ ಆಗಮನದ ಮೂವತ್ತು ವರ್ಷಗಳ ಮುಂಚೆ ಬುದ್ಧಿವಂತ ಕನ್ಯೆಯರು ಮದಲಿಂಗನನ್ನು ಭೇಟಿ ಮಾಡಲು ಹೋದರು, ನಾವು ಮುಂತಿಳಿಸಿದ ಕಾಯುವಿಕೆಯು ನೆರವೇರಿದ್ದನ್ನೂ ಮತ್ತು ಹದಿನಾಲ್ಕು (15) ವರ್ಷಗಳ ಮಧ್ಯರಾತ್ರಿಗಳಲ್ಲಿ "ಇಗೋ! ಮದಲಿಂಗನು" ಎಂಬ ಕೂಗು ಮುಂದುವರೆದದ್ದನ್ನೂ ನೋಡಿದ್ದೇವೆ. ನಾವು ವಿಶೇಷವಾದ ಆನಂದದಿಂದ 1335 ದಿನಗಳನ್ನು ಅವು 1874ನ್ನು ನಮ್ಮ ಕರ್ತನ ಆಗಮನದ ನಿಖರವಾದ ದಿನಾಂಕವಾಗಿ ಸೂಚಿಸುವುದಾಗಿ ಗುರುತಿಸಿದ್ದೇವೆ, ಅದು ಹಾಗೆಯೇ ಇದೆ, ನಾವು ಆ ಸಮಯದಿಂದ ಬಿಚ್ಚಿಕೊಳ್ಳುತ್ತಿರುವ ದೇವರ ಯೋಜನೆಯ ಅದ್ಭುತವಾದ ಧರ್ಮ ರಹಸ್ಯಗಳ ಮೂಲಕ ವಾಗ್ದತ್ತ ಆಶೀರ್ವಾದಗಳನ್ನು ಅನುಭವಿಸಿದ್ದೇವೆ.

ನಂತರದಲ್ಲಿ ನಾವು ಸುಗ್ಗಿಯ ಮಹಾಕಾರ್ಯವು ಅದರ ಸಿದ್ಧಪಡಿಸಿದ ಸಮಯ ಮತ್ತು ಕ್ರಮದಲ್ಲಿ 1874ರ ವರ್ಷದ ಶರತ್ಕಾಲದಲ್ಲಿ ಕ್ರಮೇಣವಾಗಿ, ಸಾವಧಾನವಾಗಿ ಪ್ರಾರಂಭವಾಗುವುದನ್ನು ನೋಡಿದ್ದೇವೆ. ಆದರೆ ಅದು ತ್ವರಿತಗತಿಯಲ್ಲಿ ಪ್ರಗತಿಹೊಂದುತ್ತಿದೆ. ನಾವು ಹಣಜಿಯ ಕಂತೆಕಟ್ಟುವಿಕೆ ಮತ್ತು ಬಿಗಿಗೊಳಿಸುವಿಕೆಯನ್ನೂ, ಗೋಧಿಯ ಶೇಖರಣೆಯನ್ನೂ ಗುರುತಿಸಿದ್ದೇವೆ, 1878ರ ವಸಂತ ಋತುವಿನಿಂದೀಚೆಗೆ ಅರಸನು ತನ್ನ ಮಹಾ ಅಧಿಕಾರವನ್ನು ವಹಿಸಿಕೊಂಡು ಕ್ರಿಸ್ತನಲ್ಲಿ ನಿದ್ರೆಹೋದವರು ಪುನರುತ್ಥಾನದೊಂದಿಗೆ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದಂದಿನಿಂದ ನಮಗೆ ಎಷ್ಟೋ ಆಶೀರ್ವಾದವೂ ಮತ್ತು ಸಂತೋಷವೂ ಉಂಟಾಗುತ್ತಿದೆ. ಆತನ ಸದಸ್ಯರು ನಿದ್ರೆ ಹೋಗಬೇಕೆಂಬ, ಮಹಿಮೆಗಾಗಿ ಕಾಯಬೇಕೆಂಬ ಅವಶ್ಯಕತೆ ಇನ್ನು ಮುಂದೆ ಇರುವುದಿಲ್ಲ. ಆದರೆ ಆತನ ಮರಣದಲ್ಲಿ ಮುಗಿಸುವ ಪ್ರತಿಯೊಂದು ಕ್ಷಣವೂ ದೇವರ ಹೋಲಿಕೆ ಮತ್ತು ಸ್ವಭಾವದ ಸಂಪೂರ್ಣ ಸಮರ್ಪಕತೆಗೆ 'ಬದಲಾವಣೆ'ಯಾಗುವ ಆನಂದಕರ ಕ್ಷಣವಾಗಿದೆ. "ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು" (ಪ್ರಕಟನೆ 14:13) ಎಂಬುದು ಸದಾಕಾಲಕ್ಕೂ ಸತ್ಯವಾಗಿದೆ. ಅವರು ತಮ್ಮ ಶ್ರಮೆಯಿಂದ ವಿಶ್ರಾಂತಿ ಪಡೆಯುವರು. ಆದರೆ, ಅವರ ಕೆಲಸಗಳು ಮುಂದುವರೆಯುವುವು. ಯಾಕೆಂದರೆ ಪರದೆಯ ಆಚೆಯ ಕಡೆಯ ಕೆಲಸವು ಮತ್ತೊಂದು ಬದಿಯಲ್ಲಿ ಮಾಡುವ ಕೆಲಸವು ಒಂದೇ ಆಗಿದೆ. ಇದರಲ್ಲಿ ಎಲ್ಲಾ ಜಯಶಾಲಿಗಳು ಈ ಬದಿಯ ತೆರೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ದೈವ ಸ್ವಭಾವದ ಮಹಿಮೆಯನ್ನು ಪ್ರವೇಶಿಸಿದವರಿಗೆ ಕೆಲಸವು ಎಂದಿಗೂ ಪ್ರಯಾಸಕರವಾಗಿರುವುದಿಲ್ಲ ಮತ್ತು ಇನ್ನು ಮುಂದೆ ಪ್ರಯಾಸಕರ ತ್ಯಾಗವನ್ನು ವ್ಯಯಿಸಬೇಕಾಗುವುದಿಲ್ಲ.

ಇವೆಲ್ಲವುಗಳೊಂದಿಗೆ, ದೈಹಿಕ ಇಸ್ರಾಯೇಲ್ಯರಿಗೆ ದೇವರ ಕೃಪೆಯ ಹಿಂದಿರುಗುವಿಕೆಯ ಪ್ರಾರಂಭವನ್ನು ನಾವು ನೋಡುತ್ತೇವೆ. ಇದು ಈಗಾಗಲೇ ಯೇಸುಕ್ರಿಸ್ತನ ವಿರುದ್ಧವಾದ ಅವರ ಮೊಂಡತನ ಮತ್ತು ದುರಾಗ್ರಹದಿಂದ ಅವರ ತಿರುಗುವಿಕೆಯ ಪ್ರಾರಂಭದಲ್ಲಿಯೇ, ಇತರೆ ದೇಶಗಳಿಂದ ಅವರ ಉಚ್ಚಾಟನೆ ಮತ್ತು ವಾಗ್ದತ್ತ ದೇಶವು ಅವರಿಗೆ ತೆರೆಯಲ್ಪಡುವುದರಲ್ಲಿ ಮತ್ತು ಪಾಲೆಸ್ಟೈನ್ ಫಲವತ್ತತೆಗೆ ಹಿಂತಿರುಗುವುದರಲ್ಲಿಯೇ ತಾನಾಗಿ ಪ್ರಕಟವಾಯಿತು. ಎಲ್ಲಾ ಪ್ರವಾದನಾ ದಿನಾಂಕಗಳು ಮತ್ತು ಸಮಯಗಳಲ್ಲದೆ ಈ ಬಾಹ್ಯ ಸೂಚನೆಗಳು ಮಾತ್ರವೇ ಸಭೆಯ ಅಥವಾ ರಾಜ್ಯದ ಆಯ್ದ ವರ್ಗದವರಿಗೆ ನೇಮಕವಾದ ಯುಕ್ತ ಸಮಯದಲ್ಲಿ ಜೀವಿಸುತ್ತಿದ್ದೇವೆ ಎಂಬುದಕ್ಕೆ ಪ್ರಬಲವಾದ ಸಾಕ್ಷಿಯಾಗಿದೆ. ಇದಕ್ಕೆ ಕಾರಣ ಅವರ ಮೊಂಡುತನವು ಮತ್ತು ತೆಗೆದುಹಾಕಲ್ಪಡುವ

ಸ್ಥಿತಿಯು ಕ್ರಿಸ್ತನ ದೇಹದ ಆಯ್ದ ಸದಸ್ಯರ ಆಯ್ಕೆಯವರೆಗೆ ಮಾತ್ರವೇ ಎಂಬುದು ಪರಿಶುದ್ಧ ಗ್ರಂಥದ ಆಶಾದಾಯಕ ಭರವಸೆಗಳಾಗಿವೆ.

ಅಂತಿಮ ಕಾಲದ ಈ ಕಡೇ ದಿನಾಂಕದಂದು ನಾವು ಆ ರೀತಿಯಾಗಿ ನಿಂತುಕೊಂಡವರಾಗಿ, ಆ ಕಾಲದ ಸುಗ್ಗಿಯ ಮಧ್ಯದಲ್ಲಿ, ಈ ಭಯಾನಕ ಸಮಯಗಳ ಎಲ್ಲಾ ಜಟಿಲಕರ ಪ್ರಶ್ನೆಗಳನ್ನೂ ಮುಂದಿನ ಇಪ್ಪತ್ಮೂರು ವರ್ಷಗಳ ಅಂತರದಲ್ಲಿ ನಿರ್ಧರಿಸುವುದನ್ನು ಎದುರು ನೋಡುವವರಾಗಿ, "ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿರುವುದರ" ಬಗ್ಗೆ ಎಷ್ಟೋ ಮಟ್ಟಿನ ಉದಾತ್ತ ಮತ್ತು ತೀಕ್ಷ್ಣ ಭಾವನೆಗಳು ಉಂಟಾಗುತ್ತವೆ. ದಾನಿಯೇಲನು ಮುಂತಿಳಿಸಿರುವಂತೆ, ಸಂಕಟದ ಸಮಯದಲ್ಲಿ ಒಟ್ಟುಗೂಡುವ ಬಹುಮಹತ್ವವಾದ ಮತ್ತು ಗಾಬರಿಗೊಳಿಸುವ ಪ್ರಶ್ನೆಗಳು ಈಗ ಸಾರ್ವಜನಿಕರ ಮನಸ್ಸಿನಲ್ಲಿ ಉದ್ರೇಕಗೊಳ್ಳುತ್ತಿದೆ ಮತ್ತು ಭಯಾನಕ ಸಂದಿಗ್ಧತೆಯು ವೇಗವಾಗಿ ಸಮೀಪಿಸುತ್ತಿದೆ. ಆದರೆ ದೇಶಗಳ ಮೇಲೆ ಬರಲಿರುವ ಪ್ರತೀಕಾರ ಮತ್ತು ರೌದ್ರದ ಮಹಾ ಸಂದಿಗ್ಧತೆಯನ್ನು ನಾವು ಮುಂಬರುವ ಸಂಪುಟಗಳ ಪರಿಗಣನೆಗೆ ಬಿಡಬೇಕಾಗುತ್ತದೆ. ಯಾಕೆಂದರೆ ಆ ಪ್ರಸ್ತಾಪವು ಬಹಳ ವ್ಯಾಪಕವಾದದ್ದು ಮತ್ತು ಬಹಳ ಮುಖ್ಯವಾಗಿರುವದರಿಂದ ನಮಗೆ ಸ್ಥಳಾವಕಾಶ ಸಾಲದು, ಆದರೆ ನಾವೀಗ ಸಂಕಷ್ಟಗಳಿಂದಾಚೆ ಮತ್ತು ಸಹಾಯಕಾರಿ ಶಿಸ್ತಿನ ಕ್ರಿಸ್ತನ ಆಡಳಿತದಿಂದಾಚೆ, ನಾವು, ವಿಮೋಚಿಸಲ್ಪಟ್ಟ ಮತ್ತು ಪುನರ್‌ಸ್ಥಾಪನೆಗೊಂಡ ಕುಲಗಳ ಆಶೀರ್ವದಿತ ಮತ್ತು ನಿರಂತರ ಬಾಧ್ಯತೆಯಾದ ಭವ್ಯವಾದ ವಿರಾಮ ಸ್ಥಳಗಳನ್ನು ನೋಡುತ್ತೇವೆ ಎಂದು ಹರ್ಷಿಸೋಣ.

ಇವುಗಳು ನಿಜವಾಗಿಯೂ ಅದ್ಭುತ ಸಮಯ ಗಳಾಗಿವೆ, ಆದಾಗ್ಯೂ ಕೆಲವರು ಮತ್ತು ದೃಢವಾದ ಪ್ರವಾದನಾ ಮಾತುಗಳಿಗೆ ಲಕ್ಷ್ಯಗೊಡುತ್ತಾರೆ. ಇದರ ಪರಿಣಾಮವಾಗಿ ಭವಿಷ್ಯವನ್ನು ಹೆಚ್ಚಿನ ಜನರು ಪ್ರಸ್ತುತ ಸೂಚನೆಗಳ ದೃಷ್ಟಿಕೋನದ ಮೇರೆಗೆ ಮಾತ್ರವೇ ನೋಡುವವರಾಗಿದ್ದಾರೆ. ಜನರು ತ್ವರಿತವಾಗಿ ಕೂಡಿಕೊಳ್ಳುವ ಮೋಡಗಳನ್ನು ನೋಡುತ್ತಾರೆ, ಆದರೆ ತಮ್ಮ ಬೆಳ್ಳಿ ರೇಖೆಯ ಬಗ್ಗೆ ದೇವರ ವಾಕ್ಯದ ಹೊರತಾಗಿ ಬೇರೇನೂ ಅರಿಯದವರಾಗಿರುತ್ತಾರೆ.

ಹೌದು, ಪ್ರಿಯ ವಿಮೋಚಕನಾದ ಮತ್ತು ಕರ್ತನೇ, ನಾವು ನಿನ್ನ ಪ್ರೀತಿಯ ಪ್ರತ್ಯಕ್ಷತೆಯನ್ನು ಗ್ರಹಿಸುತ್ತೇವೆ ಮತ್ತು ನಮ್ಮ ಈ ದಿನಗಳಲ್ಲಿ ನಿನ್ನ ಕೃಪಾಭರಿತ ರಾಜ್ಯದ ಸ್ಥಾಪನೆಯ ಸಾಕ್ಷ್ಯಗಳ ಬಗ್ಗೆ ಉಲ್ಲಾಸಿಸುತ್ತೇವೆ. ನಾವು ಒಂದಕ್ಕೊಂದು ಸಮೀಪಿಸುವ ದೇವರ ಸಾಕ್ಷ್ಯವನ್ನು ನೋಡುವಾಗ ನಮ್ಮ ಹೃದಯಗಳು ಕೃತಜ್ಞತೆಯೊಡನೆ ತುಂಬಿ ಹರಿಯುತ್ತದೆ – ಧರ್ಮಶಾಸ್ತ್ರದಿಂದ, ಪ್ರವಾದಿಗಳಿಂದ, ಅಪೋಸ್ತಲರುಗಳಿಂದ ಮತ್ತು ಇದುವರೆಗಿನ ನಿನ್ನ ಸ್ವಂತ ಗೂಢಾರ್ಥಗಳಿಂದ, ಮತ್ತು ದೀರ್ಘಕಾಲ ಅಡಗಿದ್ದ ಹಾಗೂ ಈಗ ಭವ್ಯ ತೇಜಕೇಂದ್ರಗಳಾಗಿರುವ ಐಗುಪ್ತದ ಅದ್ಭುತವಾದ 'ಸಾಕ್ಷ್ಯ'ದಿಂದ ಮೋಡಗಳು ಮತ್ತು ದಟ್ಟವಾದ ಅಂಧಕಾರವು ಇನ್ನೂ ಅಗೋಚರವಾಗಿದ್ದರೂ ನಿನ್ನ ಮಹಿಮೆಯು ನೀನು ನಿಶ್ಚಿತಾರ್ಥಗೊಂಡವರನ್ನು ಹೊರತುಪಡಿಸಿ ನಿನ್ನ ನಂಬಿಗಸ್ಥ ಅನುಯಾಯಿಗಳಿಗೆ ಆ ಭವ್ಯವಾದ ದಿನವು ಶೀಘ್ರದಲ್ಲಿಯೇ ಭೇಧಿಸಿಕೊಂಡು ಬರಲಿದೆ ಎಂಬುದು ತೋರಿಬರುತ್ತದೆ. ಕೇಂದ್ರ ಬಿಂದುವಿನಲ್ಲಿರುವ ಈ ಪ್ರಜ್ವಲಿಸುವ ಬೆಳಕಿನಲ್ಲಿ, ರತ್ನದ ನಂತರ ರತ್ನದಂತೆ ಇದುವರೆಗೂ ತಿಳಿಯದೇ ಇದ್ದ ನಿನ್ನ ಅಮೂಲ್ಯ ಸತ್ಯವು ಈಗ ಶೋಭಾಯಮಾನವಾಗಿ ಪ್ರಕಾಶಿಸುತ್ತದೆ ಮತ್ತು ನಿನ್ನ ಗಂಭೀರವಾದ ಪ್ರತ್ಯಕ್ಷತೆಯು ಅವುಗಳೆಲ್ಲವುಗಳಿಂದ ಪ್ರತಿಫಲಿಸುತ್ತದೆ.

"ನೀತಿವಂತರೇ, ಯೆಹೋವನಲ್ಲಿ ಆನಂದಿಸಿರಿ, ಆತನ ಪರಿಶುದ್ಧ ನಾಮವನ್ನು ಕೊಂಡಾಡಿರಿ" (ಕೀರ್ತನೆ 97:12) "ಸರ್ವ ಜನಾಂಗಗಳಿರಾ, ಚಪ್ಪಳೆ ಹೊಡೆಯಿರಿ" ಆರ್ಭಟದಿಂದ ದೇವರಿಗೆ ಜಯಧ್ವನಿ ಮಾಡಿರಿ. ಪರಾತ್ಪರನಾದ ಯೆಹೋವನು ಭಯಂಕರನಾಗಿದ್ದಾನೆ; ಆತನು ಭೂಲೋಕಕ್ಕೆಲ್ಲಾ ಅಧಿರಾಜನಾಗಿದ್ದಾನೆ" (ಕೀರ್ತನೆ 47:1)

* * * * * * *